ಅವನಿಗೆ ಕಲೆಯು ಕರಗತವಾದಾಗ ಮಾತ್ರ, ಅವನು ದೈಹಿಕವಾಗಿ ಹೆಚ್ಚು ಅಲೈಂಗಿಕವಾಗುತ್ತಾನೆ. ಹಾಗೆ ನೋಡಿದರೆ ಕಲೆಯೆನ್ನುವುದೆಲ್ಲ ವ್ಯಭಿಚಾರವೇ. ಅಥವಾ ವ್ಯಭಿಚಾರಕ್ಕೆ ಪರ್ಯಾಯವೇ! ಜಗತ್ತಿನಲ್ಲಿ ಮನಸ್ಸಿಗೆ 'ಹೈ'ಯೀವ ಯಾವುದಾದರೂ ಹಾದರವೇನೆ. ಭಕ್ತಿಯೆನ್ನುವ ಭಕ್ತಿಯೂ ಅಷ್ಟೆ. ಪದ್ಯವೆನ್ನುವ ಪದ್ಯವೂ ಅಷ್ಟೆ. ಇನ್ನು ಕಲೆ ಅಂತೆಂಬ ದೊಡ್ಡ ಸೋಗು ಕುರಿತೇನು ಹೇಳುವುದು? ಏನೂ ಮಾಡದೆ ಸುಮ್ಮನಿರಲಾಗದ್ದಕ್ಕೆ ಮನಸ್ಸು ಒಂದಲ್ಲೊಂದು ಬೆನ್ನುಹತ್ತುತ್ತದೆ. ತಂತಾನು ರಮಿಸಹತ್ತುತ್ತದೆ.

ಶಾಸನವೆಂಬುದು ನೀತಿನಿಯತಿಗಳನ್ನು ಹೇಳುವ ಲೋಗರದ್ದೇ ಇನ್ನೊಂದು ರೂಪ. ನಮ್ಮನ್ನು ಯಾರೋ ಆಳುತ್ತಿದ್ದಾರೆನ್ನುವುದೇ ಪರಿಹಾಸ್ಯವಷ್ಟೆ. ರಾಜಕೀಯವೆಂಬುದು ಜಾಹಿರಾತಿದ್ದಂತೆ; ದಾವೆ ಸುಳ್ಳೆಂದು ಇಬ್ಬರಿಗೂ ಗೊತ್ತು, ಆಳುವವರಿಗೂ ಆಳಿಸಿಕೊಳ್ಳುವವರಿಗೂ. ನನ್ನಂತಹ ಬಿಡಾಡಿಯನ್ನು ಯಾರೋ ಆಳುತ್ತಿದ್ದಾರೆನ್ನುವುದೂ ನಗು ತರುತ್ತದೆ.

ಇಷ್ಟಿದ್ದೂ ಒಂದಲ್ಲೊಂದು ಮಾಡುತ್ತಲೇ ಇರಬೇಕನಿಸುತ್ತದೆ. ಅಸಲಿನಲ್ಲಿ, ಮನುಷ್ಯನು ತಂತನಗೇ ಒಂದು ಮಾದಕವೇ ಸರಿ. ಅವನ ಮೈಮನಸ್ಸಷ್ಟೂ ತಂತಾವು ಹೈಯುಣಿಸಿಕೊಳಬಲ್ಲ ಮಧುಪಾತ್ರೆಯೆ. ವೈಭೋಗಕ್ಕಾಗಿ ಅವನು ತನ್ನ ಮೈಬಳಸುತ್ತಾನೆ. ಮನಸ್ಸು ಹೂಡುತ್ತಾನೆ. ಹೂಡಿ ಹೂಡಿ ಹೈರಾಣಾಗುತ್ತಾನೆ. ಅಧ್ಯಾತ್ಮವು ಇಲ್ಲಿರದ ಆನಂದವು ಆಕಾಶದಲ್ಲಿದೆ ಅಂತನ್ನುತ್ತದೆ. ಅದು ದಕ್ಕಿದಲ್ಲಿ ಸಾಕ್ಷಾತ್ಕಾರವೆನ್ನುತ್ತದೆ. ನಿಜಕ್ಕು ಹಾಗೊಂದು ರಿಯಲೈಸೇಶನಂತ ಇದೆಯೆ?! ಸಾಕ್ಷಾತ್ಕಾರ ಕಂಡವರು ನಿಜಕ್ಕು ಜಗತ್ತಿನಲ್ಲಿದ್ದಾರೆಯೆ?

ಈ ಪ್ರಶ್ನೆಗಳೇ ನನ್ನನ್ನು ಕಂಡಲ್ಲಿ ಅಂಡಲೆಸುತ್ತವೆ. ಜನನಿಬಿಡ ಊರುಗಳಲ್ಲಿ ಬಿಡಾಡಿಸುತ್ತವೆ. ಬೆಂಗಳೂರು ನನ್ನ ಇಷ್ಟದ ಊರುಗಳಲ್ಲೊಂದು. ನಾನಿರುವ ಟ್ರಿವೇಂಡ್ರಮ್ಮಿಗೆ ಹತ್ತಿರದ್ದು. ಹೀಗಾಗಿಯೇ ಅನಿಸಿದ್ದೇ ಬಂದುಬಿಡುತ್ತೇನೆ. ಅನಾಮಿಕವಾಗಿ ಅಲೆದಾಡುತ್ತೇನೆ. ಯಾರಂತ ಕೇಳುವವರಿಲ್ಲ, ನಾನಂತ ಹೇಳಿಕೊಳ್ಳುವುದಿಲ್ಲ. ನನಗೆ ನಾನೇ ಆದ ಏಕಾಂತವೂ ಹೈಯೆ. ಹೈಯಾದ ಮೇಲೆ ಎಲ್ಲವೂ ಸೈಯೆ! ಇಲ್ಲಿ ಹೊಸದಾಗಿ ಆಗಿರುವ ಮೆಟ್ರೋ ನನ್ನ ಹೆಸರಿಲ್ಲದ ಅಡ್ಡಾಟದ ದಾರಿಗಳಲ್ಲೊಂದು. ಬಾರ್ಟನ್ ಸೆಂಟರೆದುರಿನ 'ಬರಿಸ್ತಾ' ಕೆಫೆ ಇದೇ ಅಡ್ಡಾಟದ ಅಡ್ಡೆಗಳಲ್ಲೊಂದು. ಕೆಪಚಿನೋದೊಡನೊಂದು ಬ್ರೌನಿಯಿದ್ದರೆ ಜಗತ್ತನ್ನೇ ಮರೆತೇನು. ಇದ್ದಲ್ಲೇ ಗಂಟೆಗಟ್ಟಲೆ ಇದ್ದೇನು. ಎದುರಿರುವ ಪ್ರೊಮೆನಾಡಿನ ಮೇಲ್ಕೆಳಗಿನ ಮಂದಿ ಕಾಣುತ್ತ ಇದ್ದೇ ಇದ್ದೇನು.

**And what I often do is this kind of absoluteflanerie. Absolutely!**

### ಕತೆ:

'ಹೇ... ನೀನು ಸಿಕ್ಕಿದ್ದು ಖುಷಿ ಆಯಿತು... ಬೇರೇನು ಹೇಳು...'

'ಇನ್ನೇನೂ ವಿಶೇಷ ಅಂತಿಲ್ಲ... ನೀನು ಸಿಕ್ಕಿದ್ದರ ಹೊರತಾಗಿ!!'

'ಹೆಣ್ಣೇ... ಚೆನ್ನಾಗಿ ಹೇಳಿದೆ. ಏನು ಗೊತ್ತಾ, ನೀನು ನಗುವಾಗ ಮತ್ತೂ ಚೆನ್ನನಿಸುತ್ತೀಯೆ... ತುಟಿಯರಳಿದರೆ ಸಾಕು, ಗಲ್ಲದಲ್ಲಿ ಗುಳಿ ಬೀಳುತ್ತಲ್ಲ, ಅವುಗಳಲ್ಲಿ ಈಡಾಡಾಬೇಕು ಅನಿಸುತ್ತೆ...'

'ಆಹಾ! ಹೀಗೇ ಏನು, ನೀನು ಎಲ್ಲರನ್ನೂ ಮೋಡಿ ಮಾಡೋದು?! ಚೆನ್ನಾಗಿ ಫ್ಲರ್ಟ್ ಮಾಡುತೀಯೆ!!...'